# ಆಗಲೆ ಕಾಯಬೇಕು ಅಂಬುಜಾಕ್ಷನೆ ಎನ್ನ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 87.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 195.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 37.
4. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 283.
5. **Note:** Lyrics given without highlights are as per Ref. 1. The wordings in Ref. 2 are same as in Ref. 1. Lyrics given in green highlights are as per Ref. 3. The wordings in Ref. 4 are a mix of Ref. 1 and Ref. 3 and hence are not considered here.
6. **Note:** After going through the wordings, I am of the opinion that the lyrics in Ref. 1 are more appropriate.
7. **Note:** Singer has followed lyrics mixing the wordings from Ref. 1 and Ref. 2.

ರಾಗ: ಸಾವೇರಿ ತಾಳ: ಛಾಪು

ಆಗಲೆ ಕಾಯಬೇಕು ಅಂಬುಜಾಕ್ಷನೆ ಎನ್ನ
ಈಗ ನೀ ಕಾಯ್ದರೇನು ಕಾಯದಿದ್ದರೇನು ॥ ಪ ॥

ಹೊನ್ನು ಹಣ ಎನಗುಂಟು ಹೆಸರಾದ ಮನೆಯುಂಟು
ಚಿನ್ನ-ಚೀನಾಂಬರವುಂಟು ಚೆಲುವುಪ್ಪರಿಗೆಯುಂಟು
ಮೊನ್ನೆ ಹುಟ್ಟಿದ ಗಂಡು ಮಗು ಒಂದು ಎನಗುಂಟು
ಸನ್ನೆ ಶಕ್ತಿಗುಂದಿದಾಗ ಸಂಗಡಲೊಬ್ಬರ ಕಾಣೆ ॥ 1 ॥

ನಂಟರಿಷ್ಟರು ಉಂಟು ನೆರೆ-ಹೊರೆ ಎನಗುಂಟು
ಎಂಟು ಭಾಗ್ಯಗಳುಂಟು ಬಂದು ಹೋಗುವರುಂಟು
ಕಂಠಕೆ ಹೊದ್ದಿದ ಕಾಂತೆಯರೆನಗುಂಟು

ಒಂಟಿಯಾಗಿ ಹೋಗುವಾಗ ಸಂಗಡೊಬ್ಬರನು ಕಾಣೆ || 2 ||

ಒಂದು ಕ್ಷಣ ಮೊದಲಾದ ವಾತ-ಘಾತಗಳಿಂದ
ಅಂದಿನ ವ್ಯಾಧಿಗಳು ಬಾಧಿಸುತಿರಲು
ಇಂದಿರೇಶನೆ ನಿನ್ನ ಸಂಗವೆಲ್ಲವ ಬಿಟ್ಟೆ
ಬಂದಿನ್ನು ಕಾಯಬೇಕೊ ಪುರಂದರವಿಠಲ || 3 ||

**Note:** The lyrics given below in green highlights are as per Ref. 3.

ರಾಗ: ಸಾವೇರಿ ತಾಳ: ಛಾಪು

ಆಗಲೇ ಕಾಯಬೇಕೋ ಅಂಬುಜಾಕ್ಷನೆ ಎನ್ನ || ಪ ||
ಈ ಜಗದಿ ಕಾಯ್ದರೇನೊ ಕಾಯದಿದ್ದರೆ ಏನೊ || ಅಪ ||

ಅನುಜ-ತನುಜರುಂಟು ಬಹು ಹಣವೊಳಗುಂಟು
ಚಿನ್ನ ಪೀತಾಂಬರವುಂಟು ಉಪ್ಪರಿಗೆಯುಂಟು
ಮೊನ್ನೆ ಹುಟ್ಟಿದ ಗಂಡು ಮಗನೊಬ್ಬನೆನಗುಂಟು
ಸನ್ನೆ ಸಂಜ್ಞೆಗುಂದಿದಾಗ ಸಂಗಡ ಒಬ್ಬರ ಕಾಣೆ || 1 ||

ನೆಂಟರಿಷ್ಟರು ಉಂಟು ನೆರೆ ಹೊರೆ ಎನಗುಂಟು
ಬಂಟ-ಬಳಗವುಂಟು ಭಾಗ್ಯವುಂಟು
ಕಂಠದಲ್ಲಿ ಬದ್ಧರಾದ ಕಾಂತೆಯರೆನಗುಂಟು
ಒಂಟಿಯಾಗಿ ಪೋಗುವಾಗ ಸಂಗಡ ಒಬ್ಬರ ಕಾಣೆ || 2 ||

ಒಂದು ಕ್ಷಣದಲ್ಲಿ ವಾತ ಪಿತ್ತ ಕಫ ಮೊದಲಾಗಿ
ಸಂಧಿ ವ್ಯಾಧಿಗಳಿಷ್ಟು ಬಾಧಿಸುತಿರೆ
ಇಂದಿರೇಶ ನಿನ್ನ ನಾಮವೊಂದೇ ಕಾಯುವುದಕೆ
ಬಂದೆನ್ನ ಸಲಹಯ್ಯ ಪುರಂದರವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಅನುಜ** – ತಮ್ಮ.

**ತನುಜ** – ಮಗ.

**ಸನ್ನೆ ಸಂಜೆ ಕುಂದಿದಾಗ** – ಕೊನೆಯ ಗಳಿಗೆಯಲ್ಲಿ ಅರಿವು ಮರೆಯಾಗುವಾಗ.

**ಕಂಠಕ್ಕೆ ಬದ್ಧಳಾದ ಕಾಂತೆ** – ಕೊರಳಿಗೆ ಕಟ್ಟಿಕೊಂಡ ಹೆಂಡತಿ.

**ಚೀನಾಂಬರ** = ರೇಷ್ಮೆ ಬಟ್ಟೆ

**ಸನ್ನೆ** = ಸಂಜ್ಞೆ, ಮನೋಭಾವವನ್ನು ತಿಳಿಸುವ ರೀತಿ

**ಎಂಟು ಭಾಗ್ಯ** = ರಾಜ್ಯ, ಭಂಡಾರ, ಸೈನ್ಯ, ಆನೆ, ಕುದುರೆ, ಛತ್ರ, ಚಾಮರ, ಪಲ್ಲಕ್ಕಿ

**ಕಂಠಕೆ ಹೊದ್ದಿದ** = ಕೊರಳಿಗೆ ಬಿದ್ದ

**ವಾತ ಘಾತ** = ವಾತ ವಿಕಾರ

**Classification:** Keerthane
**Ankita:** purandara vittala
**Location:** NA
**Category:** Aartha Bhava, Vidhi Chintane,
**Sub-Category:** Vishnu, Narayana, bangara, rokka, mane, huttu, maga, putra, bandhu, Bhagya, roga, hennu, loka,
**Pravachana:** NA
**Explanation:** NA